# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ|| ವೈ.ಎ.ನಾರಾಯಣಸ್ವಾಮಿ, ಇವರು ನಿಯಮ 330 ರಡಿಯಲ್ಲಿ ಕೋರಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಗಮನ ಸೆಳೆಯುವ ಸೂಚನೆ:-**

ಕಾರ್ಮಿಕ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕಾರ್ಮಿಕ ಮಂಡಳಿಯಲ್ಲಿ ಸಾವಿರಾರು ಕೋಟಿ ರೂ. ಕಲ್ಯಾಣ ನಿಧಿ ಇದ್ದರೂ ಸಹ ಸುಮಾರು ವರ್ಷಗಳಿಂದ ಈ ಹಣವನ್ನು ಬಳಕೆ ಮಾಡದೇ ಕಾರ್ಮಿಕರಿಗೋಸ್ಕರ, ಅವರ ಮಕ್ಕಳ ಭವಿಷ್ಯಕೋಸ್ಕರ ಮತ್ತು ಅವರ ಕ್ಷೇಮಾಭಿವೃದ್ಧಿಗಾಗಿ ಯಾವುದೇ ಗಂಭೀರವಾದ ಪ್ರಯತ್ನ ಪಡದೇ ಇರುವ ವಿಚಾರವನ್ನು ನಿಯಮ 330 ರ ಅಡಿಯಲ್ಲಿ ಚರ್ಚಿಸಲು ಅವಕಾಶ ಕಲ್ಪಿಸಿಕೊಡಬೇಕಾಗಿ ಕೋರುತ್ತೇನೆ.

**ಉತ್ತರ:** ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾಷರತ್ತುಗಳು) ಕಾಯ್ದೆ, 1996ರ ಕಲಂ 22 ರಡಿ ಮಂಡಳಿಯಲ್ಲಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಯೋಜನೆಗಳನ್ನು ರೂಪಿಸಿ ಮಂಡಳಿಯಿಂದ ಅನುಷ್ಠಾನ ಮಾಡಲು ಅವಕಾಶವಿರುತ್ತದೆ. ಇದರನ್ವಯ ಮಂಡಳಿಯು ಕರ್ನಾಟಕ ನಿಯಮಗಳನ್ನು ರೂಪಿಸಿ ನೋಂದಾಯಿತ ಫಲಾನುಭವಿಗಳಿಗೆ ಹಲವಾರು ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಯೋಜನೆಗಳನ್ನು ಒದಗಿಸುತ್ತಿದೆ.

ಮಂಡಳಿಯು ರೂಪಿಸಿರುವ ಎಲ್ಲಾ ಯೋಜನೆಗಳು ಕಾರ್ಮಿಕರ ಬದುಕಿನ ವಿವಿಧ ಹಂತದಲ್ಲಿ ಅವರಿಗೆ ಸುರಕ್ಷತೆಯನ್ನುಒದಗಿಸಲು ರೂಪಿಸಿರುವ ಯೋಜನೆಗಳಾಗಿರುತ್ತದೆ. ಈ ಯೋಜನೆಗಳನ್ನು ಕಾರ್ಮಿಕರ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಲ್ಲಿ, ಆತನು ಅಥವಾ ಆತನ ಮಕ್ಕಳು ಮದುವೆಯಾದಲ್ಲಿ ಅಥವಾ ಯಾವುದೇ ಅಪಘಾತದಲ್ಲಿ ಮೃತಪಟ್ಟಲ್ಲಿ ಅಥವಾ ಅಂಗನ್ಯೂನತೆ ಹೊಂದಿದ್ದಲ್ಲಿ, ಆರೋಗ್ಯ ಸಮಸ್ಯೆಗೆ ಒಳಗಾಗಿ ಚಿಕಿತ್ಸೆ ಪಡೆದಲ್ಲಿ ಅಥವಾ 60 ವರ್ಷಪೂರ್ಣಗೊಳಿಸಿದವರಿಗೆ ಮಾತ್ರ ನೀಡಲು ಅವಕಾಶವಿರುತ್ತದೆ. ಇದಲ್ಲದೇ ಕಾಯ್ದೆಯ ಕಲಂ 22 ರಲ್ಲಿ ನಿರೂಪಿಸಿರುವ ಉದ್ದೇಶಗಳಿಗೆ ಮಾತ್ರ ಈ ಸುಂಕ ನಿಧಿಯ ಮೊತ್ತವನ್ನು ಖರ್ಚು ಮಾಡಬೇಕೆಂಬ ನಿರ್ಬಂಧವಿರುತ್ತದೆ.

ಮಂಡಳಿಯು ಕಾರ್ಮಿಕರನ್ನು ಫಲಾನುಭವಿಗಳಾಗಿ ನೋಂದಾಯಿಸಲು ವ್ಯಾಪಕ ಪ್ರಚಾರವನ್ನು ನೀಡುತ್ತಿದೆ ಇದಲ್ಲದೇ ನೋಂದಣಿ ಪ್ರಕ್ರಿಯೆಯನ್ನು ಕೂಡ ಕಾರ್ಮಿಕರಿಗೆ ಅನುಕೂಲವಾಗುವಂತೆ ಸರಳೀಕರಿಸಿರುತ್ತದೆ. ಅವಶ್ಯವಿದ್ದಲ್ಲಿ ಕಾರ್ಮಿಕರನ್ನು ಅವರು ಕೆಲಸ ನಿರ್ವಹಿಸುತ್ತಿರುವ ಸ್ಥಳದಲ್ಲೇ ನೋಂದಣಿ ಮಾಡಲು ಕೂಡ ಕ್ರಮಕೈಗೊಳ್ಳಲಾಗುತ್ತಿದೆ. ಇದಲ್ಲದೇ ಕೋವಿಡ್ 1ನೇ ಮತ್ತು 2ನೇ ಅಲೆಯಲ್ಲಿ ಸಂಕಷ್ಟಕ್ಕೆ ಒಳಗಾದ ಕಾರ್ಮಿಕರಿಗೆ ಧನ ಸಹಾಯವನ್ನು ಹಾಗೂ ಆಹಾರ ಸಾಮಾಗ್ರಿಗಳ ಕಿಟ್ ಗಳನ್ನು ಕೂಡ ನೀಡಲಾಗಿರುತ್ತದೆ.

ಇಲ್ಲಿಯವರಗೆ ಮಂಡಳಿಯಲ್ಲಿ ಸಂಗ್ರಹವಾದರೂ.10559 ಕೋಟಿಗಳಲ್ಲಿ ಕೋವಿಡ್ ಪರಿಹಾರ ಸಹಿತ ರೂ.5666 ಕೋಟಿಗಳನ್ನು ಕಾರ್ಮಿಕರ ಕಲ್ಯಾಣಕ್ಕಾಗಿ ವಿನಿಯೋಗಿಸಲಾಗಿರುತ್ತದೆ.

**ಕಾಇ 559 ಎಲ್ಇಟಿ 2023**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**